ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಚಾ.ಸಾ.77 ಪ್ರಾ.ಸಾ.6)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕಃ25.01.2021.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಡಾಃ ಡಿ.ನಾಗೇಶ್ |
| ತಂದೆಯ/ಗಂಡನ ಹೆಸರು | ಃ | ಲೇಟ್ ವಿ.ಮಲ್ಲೇಶಪ್ಪ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ನಿವೃತ್ತ ವೈದ್ಯಾಧಿಕಾರಿ |
| ವಾಸ | ಃ | ವಿದ್ಯಾರಣ್ಯಪುರ, ಬೆಂಗಳೂರು. |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ನಾನು ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ದಿಃ11.01.1997ರಿಂದ ದಿಃ31.08.2011ರವರೆಗೆ ಹಿರಿಯ ತಜ್ಞ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ. ದಿಃ13.02.2010ರಂದು ವಿಶ್ವನಾಥಪುರ ಪೋಲಿಸ್ ಠಾಣೆಯ ಪೋಲಿಸರ ಮನವಿ ಮೇರೆಗೆ ದೊಡ್ಡಚಿನ್ನಪ್ಪ ಶವ ಪರೀಕ್ಷೆಯನ್ನು ದಿಃ13.02.2010ರಂದು ಬೆಳಗ್ಗೆ 11ರಿಂದ 12 ಗಂಟೆಯವರೆಗೆ ಶವ ಪರೀಕ್ಷೆ ಮಾಡಿದ್ದೆ.

2. ಶವ ಪರೀಕ್ಷೆ ವೇಳೆ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

a. A Transverse injury measuring about 1x3/4x2 over left Ilice area with protraction of loop of Intartine coil

b. A Transverse injury measuring about 1/1x1/2x3/4x2 over right Ilice area with protraction of loop of Intartine coil

c. All internal organs was intact and tare

d. Left ventical empty

e. Abdomen cavity was not intact, showed blood in lower peritonial cavity with lacerated injury to peritonial expose the coils outside the insized wound

f. Liver and Spleen intact

g. Kidneys bladderal area intact

h. Dissection of Lower part of abdomen, showed in blood in lower peritoneal covity with injury to peritoneal exposing the coils of intacting outside the insized wound.

All the above said injuries are Anti mortem in nature. Cause of death due to shock and hammerage at the result of injuries to vital organ of intestines. Time of death is about 20 to 22 hours priors to postmortem examination.

3. ಈ ಬಗ್ಗೆ ನಾನು ಶವ ಪರೀಕ್ಷಾ ವರದಿ ನೀಡಿದ್ದೆ. ಸಾಕ್ಷಿ ವರದಿ ಮತ್ತು ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-5(ಎ) ಎಂದು ಗುರುತು ಮಾಡಲಾಯಿತು. ಮೃತರ ಮೈಮೇಲಿದ್ದ ಬಟ್ಟೆಗಳನ್ನು ನಾನು ಸಂಗ್ರಹಿಸಿ ಪೋಲಿಸ್ ವಶಕ್ಕೆ ನೀಡಿದ್ದೆ.

(ಪಿಪಿ ರವರು ಮಾಲುಗಳ ಮೇಲಿರುವ ಬಟ್ಟೆ ಮತ್ತು ಸೀಲನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ಸಾಕ್ಷಿ ಮೃತರ ಮೈಮೇಲಿದ್ದ ಶರ್ಟ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ-16 ಎಂದು ಗುರುತು ಮಾಡಲಾಯಿತು. ಮೃತರ ಮೈಮೇಲಿದ್ದ ಒಂದು ಒಳಅಂಗಿ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ-17 ಎಂದು ಗುರುತು ಮಾಡಲಾಯಿತು. ಮೃತರ ಮೈಮೇಲಿದ್ದ ಒಂದು ನಿಕ್ಕರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ-18 ಎಂದು ಗುರುತು ಮಾಡಲಾಯಿತು.

4. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಚಾಕುವನ್ನು ನೋಡಿದ್ದು ಸದರಿ ಚಾಕುವನ್ನು ಪೋಲಿಸರು ಶವ ಪರೀಕ್ಷೆಯ ನಂತರ ನನ್ನ ಮುಂದೆ ಹಾಜರುಪಡಿಸಿದ್ದರು. ಮು.ಮಾ-2 ಚಾಕುವಿನಿಂದ ಮೃತರ ದೇಹದ ಮೇಲೆ ಆಗಿದ್ದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ನಾನು ಅಭಿಪ್ರಾಯ ನೀಡಿದ್ದೆ.

5. ದಿಃ13.02.2010ರಂದು ವಿಶ್ವನಾಥಪುರ ಪೋಲಿಸ್ ಠಾಣೆಯ ಪೋಲಿಸರ ಮನವಿ ಮೇರೆಗೆ ದೇವರಾಜರವರ ಶವ ಪರೀಕ್ಷೆಯನ್ನು ಬೆಳಗ್ಗೆ 08.30ರಿಂದ 09.30ಗಂಟೆಯವರೆಗೆ ಶವ ಪರೀಕ್ಷೆ ಮಾಡಿದ್ದೆ.

6. ಶವ ಪರೀಕ್ಷೆ ವೇಳೆ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

a. A insized wound measuring about 3/4x1/2x1/4 over interior aspect of lower part of left thorax

b. Left testicles swollen and redemetour

c. All organ are intact and pale

d. Left testicle not intact with testicle swollen and redemetour

e. Dissection of testis left side showed congestion in a oedametous

All the above said injuries are Anti mortem in nature. Cause of death due to nuregonic shock as a result of direct blow to left testis. Time of death is about 20 to 22 hours priors to postmortem examination. But by mistakenly in the report time since death shown as 10 to 11 hours prior to postmortem examination.

(ಪಿಪಿ ರವರು ಮಾಲುಗಳ ಮೇಲಿರುವ ಬಟ್ಟೆ ಮತ್ತು ಸೀಲನ್ನು ತೆಗೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ಸಾಕ್ಷಿ ಮೃತರ ಮೈಮೇಲಿದ್ದ ನೀಲಿ ಬಣ್ಣದ ಶರ್ಟ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ-19 ಎಂದು ಗುರುತು ಮಾಡಲಾಯಿತು. ಮೃತರ ಮೈಮೇಲಿದ್ದ ಒಂದು ಪ್ಯಾಂಟ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ-20 ಎಂದು ಗುರುತು ಮಾಡಲಾಯಿತು. ಮೃತರ ಮೈಮೇಲಿದ್ದ ಒಂದು ಅಂಡರ್‌ವೇರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ-21 ಎಂದು ಗುರುತು ಮಾಡಲಾಯಿತು.

7. ಈ ಬಗ್ಗೆ ನಾನು ಶವ ಪರೀಕ್ಷಾ ವರದಿ ನೀಡಿದ್ದೆ. ಸಾಕ್ಷಿ ವರದಿ ಮತ್ತು ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-6(ಎ) ಎಂದು ಗುರುತು

ಮಾಡಲಾಯಿತು. ಯಾವುದೇ ವ್ಯಕ್ತಿಯನ್ನು ನೇರವಾಗಿ ಒದ್ದಲ್ಲಿ ನಿಪಿ-6ರಲ್ಲಿ ನಮೂದು ಮಾಡಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

8. ನಾನು ದಿಃ12.02.2010ರಂದು ಗಾಯಾಳು ಮಂಜುನಾಥರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಬೆಳಗ್ಗೆ 09.45ಕ್ಕೆ ಪರೀಕ್ಷೆ ಮಾಡಿದ್ದೆ. ಆತನನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

a. A triangular cut injury 1x1x1/2 inch over left peritol area.

b. A linear cut injury 1x1/2 inch over right lamber area

9. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೆ. ಸಾಕ್ಷಿ ಸದರಿ ಗಾಯದ ಪ್ರಮಾಣ ಪತ್ರ ಮತ್ತು ಸಹಿ ನೋಡಿ ಗುರುತಿಸಿದ್ದು ಪತ್ರವನ್ನು ನಿಪಿ-7 ಎಂದು ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರತು ಮಾಡಲಾಯಿತು.

10. ನಿಪಿ-7ರಲ್ಲಿ ಕಂಡುಬರುವ ಗಾಯಗಳು ಚಾಕುವಿನಿಂದ ಹಲ್ಲೆ ಮಾಡಿದ್ದಲ್ಲಿ ಆಗುವ ಸಾಧ್ಯತೆ ಇರುತ್ತದೆ. ಪೋಲಿಸರು ಮು.ಮಾ-3 ಒಂದು ಚಾಕುವನ್ನು ನನ್ನ ಮುಂದೆ ಹಾಜರುಪಡಿಸಿದ್ದು ನಾನು ಸದರಿ ಚಾಕುವಿನನಿಂದ ಹಲ್ಲೆ ಮಾಡಿದ್ದಲ್ಲಿ ನಿಪಿ-7ರಲ್ಲಿ ಕಂಡುಬರುವ ಗಾಯಗಳು ಹಲ್ಲೆ ಮಾಡಿದ್ದಲ್ಲಿ ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ನೀಡಿದ್ದೇನೆ.

11. ನಾನು ದಿ:12.02.2010ರಂದು ಗಾಯಾಳು ಮುನಿಕೃಷ್ಣಪ್ಪ ಹಲ್ಲೆಯ ಹಿನ್ನೆಲೆಯಲ್ಲಿ ಬೆಳಗ್ಗೆ 09.45ಕ್ಕೆ ಪರೀಕ್ಷೆ ಮಾಡಿದ್ದೆ.

ಆತನನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

a. A transfers deep cut injury 2x3/4 inch over left Ilice area and left lubar area

b. A circular contusion over epigastria area

c. A linear contusion over lower 1/3 of right leg

12. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೆ. ಸಾಕ್ಷಿ ಸದರಿ ಗಾಯದ ಪ್ರಮಾಣ ಪತ್ರ ಮತ್ತು ಸಹಿ ನೋಡಿ ಗುರುತಿಸಿದ್ದು ಪತ್ರವನ್ನು ನಿಪಿ-8 ಎಂದು ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರತು ಮಾಡಲಾಯಿತು. 1ನೇ ಗಾಯ ಮು.ಮಾ-3 ಚಾಕುವಿನಿಂದ ಹಲ್ಲೆ ಮಾಡಿದ್ದಲ್ಲಿ ಆಗುವ ಸಾಧ್ಯತೆ ಇರುತ್ತದೆ. 2 ಮತ್ತು 3ನೇ ಗಾಯಗಳು ಮುಷ್ಠಿಯಿಂದ ಹೊಡೆದಲ್ಲಿ ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ನೀಡಿದ್ದೇನೆ. ಸದರಿ ಚಾಕುವನ್ನು ಪೋಲಿಸರು ನನ್ನಮುಂದೆ ಹಾಜರುಪಡಿಸಿದ್ದರು.

13. ನಾನು ದಿ:12.02.2010ರಂದು ಗಾಯಾಳು ಮುನಿರಾಜಪ್ಪ ಹಲ್ಲೆಯ ಹಿನ್ನೆಲೆಯಲ್ಲಿ ಬೆಳಗ್ಗೆ 11.30ಕ್ಕೆ ಪರೀಕ್ಷೆ ಮಾಡಿದ್ದೆ.

ಆತನನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವು.

a. A superficial cut injury 1x1/2 inch over left side of chest

b. A superficial cut injury over palmar aspect of left little finger

14. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೆ. ಸಾಕ್ಷಿ ಸದರಿ ಗಾಯದ ಪ್ರಮಾಣ ಪತ್ರ ಮತ್ತು ಸಹಿ ನೋಡಿ ಗುರುತಿಸಿದ್ದು ಪತ್ರವನ್ನು ನಿಪಿ-9 ಎಂದು ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರತು ಮಾಡಲಾಯಿತು. ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಎರಡು ಗಾಯಗಳು ಮು.ಮಾ-3 ಚಾಕುವಿನಿಂದ ಹಲ್ಲೆ ಮಾಡಿದ್ದಲ್ಲಿ ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ನೀಡಿದ್ದೇನೆ. ಸದರಿ ಚಾಕುವನ್ನು ಪೋಲಿಸರು ನನ್ನಮುಂದೆ ಹಾಜರುಪಡಿಸಿದ್ದರು.

15. ನಾನು ಪೋಲಿಸರು ಹಾಜರುಪಡಿಸಿದ್ದ ಆಯುಧಗಳನ್ನು ಪರೀಕ್ಷಿಸಿ ಅಭಿಪ್ರಾಯ ನೀಡಿದ್ದೆ. ಸಾಕ್ಷಿ ಅಭಿಪ್ರಾಯದ ವರದಿ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ನಿಪಿ-10 ಮತ್ತು 10(ಎ) ಎಂದು ಗುರುತು ಮಾಡಲಾಯಿತು.

**16. ಪಾಟೀ ಸವಾಲುಃ** ಆರೋಪಿಗಳ ಪರ ವಕೀಲರು ಹಾಜರಿದ್ದು ಗಾಯಾಳುಗಳ ಪಾಟೀ ಸವಾಲಿನ ನಂತರ ವೈದ್ಯರನ್ನು ಪಾಟೀ ಸವಾಲು ಮಾಡುವುದಾಗಿ ನುಡಿದಿದ್ದು ಪ್ರಕರಣ ಕಲಂ 302ರ ಅನ್ವಯ ದಾಖಲಾತಿದ್ದು ಮು.ಮಾ-3 ಚಾಕುವಿನಿಂದ ಹಲ್ಲೆಯಾಗಿರುತ್ತದೆ ಎಂದು ಸಾಕ್ಷಿ ನುಡಿದಿರುವುದರಿಂದ ಆರೋಪಿ ಪರ ವಕೀಲರ ಕೋರಿಕೆಯಂತೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಓ ಹೇ ಸಾ ಸ ಸಹಿ ಮಾಡಿದ್ದಾರೆ,**

**(ಪ್ರಶೀಲಾ ಕುಮಾರಿ ಜಿ ಎಸ್)**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.**